ಹಂಗೆ ಏನೇನೋ ಕಾಗದಪತ್ರ ಮಾಡಿಕೊಂಡು ಯಾರ್‍ಯಾರಿಂದಲೋ ಲಕ್ಷಾಂತರ ಹಣ ಮುಂಗಡ ತೆಗೆದುಕೊಂಡಿದ್ದಾನೆಂಬುದು ಗೊತ್ತಾಯಿತು. ದೊಡ್ಡಮಗಾ ತಕರಾರು ತೆಗೆಯಲಾರಂಭಿಸಿದ. ಹೊಸ ಸೊಸೆ ಯಾರನ್ನೂ ಮಾತನಾಡಿಸುತ್ತಲೇ ಇರಲಿಲ್ಲ. ಹೊತ್ತಿಗೆ ಸರಿಯಾಗಿ ತನ್ನ ರೂಮಿನಿಂದ ಹೊರಕ್ಕೆ ಬಂದು ಉಂಡೋ ತಿಂದೋ ಹೋಗುತ್ತಿದ್ದಳು. ಅತ್ತೆ 'ಯಾತಕ್ಕೂ ಬರದೆ ಉಣ್ಣಕ್ಕೆ ಮಾತ್ರ ಬರ್ತಿಯಲ್ಲಮ್ಮಿ, ಇದೇನು ಹೋಟ್ಲೋ ಮನೇನೋ?' ಅಂತ ಕೇಳಿದ್ದಕ್ಕೆ ತೌರಿಗೆ ಹೋದವಳು ಬೇರೆ ಮನೆ ಮಾಡಿದರೆ ಮಾತ್ರ ಗಂಡನಮನಿಗೆ ಬತ್ತೀನಿ ಎಂದು ಹಟ ಹಿಡಿದಳು. 'ಓ ಇದು ಸರಿ ಹೋಗಲ್ಲ' ಅಂತ ಗುರುಸ್ವಾಮಿಯೇ ಹಳೆಮನೆ ರಿಪೇರಿ ಮಾಡಿಸಿ ಹೊಸದಾಗಿ ಎರಡು ರೂಮುಗಳನ್ನು ಕಟ್ಟಿಸಿ ಕಿರಿಮಗನನ್ನು ಅಲ್ಲಿರಲು ಕಳಿಸಿದ್ದರು. ಮತ್ತೆ ಆರು ತಿಂಗಳು ಬಿಟ್ಟು ಮುದ್ದಾದ ಮಗುವೊಂದನ್ನು ಎತ್ತಿಕೊಂಡು ಬಂದ ಕಿರಿಸೊಸೆಯನ್ನು ಗುರುಸ್ವಾಮಿ ಮತ್ತು ಅವನ ಹೆಂಡತಿ ಮೊಮ್ಮಗುವಿನ ಆಸೆಗೆ ಚೆನ್ನಾಗೇ ನೋಡಿಕೊಂಡಿದ್ದರು. ಅವರವರ ಸಂಸಾರ ಅವರಿಗೆ ಎಂದು ಎಷ್ಟೇ ಸಮಾಧಾನ ಮಾಡಿಕೊಂಡರೂ ಕಿರಿಸೊಸೆ ಮತ್ತು ಮಗನ ಕಿರಿಕಿರಿ ದಿನೇ ದಿನೇ ಹೆಚ್ಚುತ್ತಲೇ ಹೋಯಿತು. ಚಿನಾಹಳ್ಳಿ ಪಕ್ಕದ ಜಮೀನನ್ನು ಅಭಿವೃದ್ಧಿ ಮಾಡಿದ್ದು ತಾನೇ ಆದದ್ದರಿಂದ ಅದು ತನ್ನದೇ, ಬೇಕಾದರೆ ಒಂದೆರಡು ಸೈಟುಗಳನ್ನು ಅಣ್ಣನಿಗೆ ಕೊಡ್ತೀನಿ ಎಂದು ತಾನೇ ತೀರ್ಮಾನ ಮಾಡಿಕೊಂಡಿದ್ದ. ಬರಬರುತ್ತಾ ಇದು ದಿನನಿತ್ಯದ ಜಗಳಕ್ಕೆ ಕಾರಣವಾಗಿತ್ತು. ಇದೆಲ್ಲ ಸರಿಯಲ್ಲವೆಂದು ಹೇಳಲು ಹೋದ ಗುರುಸ್ವಾಮಿ ಮತ್ತು ಅವನ ಹೆಂಡತಿಯನ್ನು ಕಿರಿಸೊಸೆ ಮನೆ ಒಳಕ್ಕೆ ಕರೆಯುವುದನ್ನು ಬಿಟ್ಟುಬಿಟ್ಟಿದ್ದಳು. ಹೋಗುವುದೇ ಬೇಡ ಅಂದುಕೊಂಡರೂ ಮೊಮ್ಮಗುವಿನ ಸೆಳೆತ ತಡೆದುಕೊಳ್ಳಲು ಇಬ್ಬರಿಗೂ ಸಾಧ್ಯವಾಗುತ್ತಿರಲಿಲ್ಲ. ಮುದುಕ ಮುದುಕಿ ಇಬ್ಬರಿಗೂ ಇದು ಕಣ್ಣಲ್ಲಿ ಮುರಿದ ಮುಳ್ಳಾಗಿತ್ತು.

ಕೊನೆಮಗಳು ನಿಮ್ಮಿ ಚಿನಾಹಳ್ಳಿಯ ಸರ್ವೋದಯ ಕಾಲೇಜಿಗೆ ಹೋಗಿಬರುತ್ತಿದ್ದಳು. ಕೊನೆಯವರ್ಷದ ಬಿಕಾಂ ಓದುತ್ತಿದ್ದಳು. ಈವರ್ಷ ಮುಗಿದರೆ ಡಿಗ್ರಿ ಮುಗಿಯುತ್ತೆ ಮುಂದಿನವರ್ಷ ಮದುವೆ ಮಾಡಿಬಿಡೋಣ ಅಂತಾ ಗುರುಸ್ವಾಮಿ ತನಗೆ ಬೇಕಾದವರಿಗೆ ಹೇಳಿಕೊಂಡಿದ್ದನು. ಒಂದೆರಡು ಒಳ್ಳೆಯ ಸಂಬಂಧಗಳನ್ನೂ ಕಂಡುಕೊಂಡಿದ್ದನು. ಬಿಳಿಗೆರೆಯ ಮೇಷ್ಟ್ರೊಬ್ಬರು ತಮ್ಮ ಮಗನಿಗೆ ಸಂಬಂಧ ಬಯಸಿ ಫೋನಿನಲ್ಲಿ ಮಾತಾಡಿದ್ದರು. ಅವರಿಗೂ ತನ್ನಷ್ಟೆ ಅಡಕೆ ತೋಟ ಇದ್ದುದರಿಂದ ಅಂತಸ್ತಿಗೆ ಸರಿಹೋಗುತ್ತೆ ಅನ್ನಿಸಿತ್ತು. ಮಕ್ಕಳ ಜೊತೆಗೆ ಮಾತಾಡಿ ತಿಳಿಸುವುದಾಗಿ ಹೇಳಿದ್ದ. ಇವತ್ತು ಒಬ್ಬೊಬ್ಬರ ಹತ್ತಿರವೂ ಪ್ರಸ್ತಾಪಿಸಿ ಒಮ್ಮೆ ಹೋಗಿಬರೋಣ ಅಂದುಕೊಂಡಿದ್ದ.

ಒಳಗೆ ಬಂದ ಗುರುಸ್ವಾಮಿಗೆ ಮಗ-ಸೊಸೆ ಏನೋ ಗುಸಗುಸ ಪಿಸಪಿಸ ಮಾತಾಡಿಕೊಳ್ಳುತ್ತಿರುವುದು ಗಮನಕ್ಕೆ ಬಂತು. ಅಪ್ಪನನ್ನು ಕಂಡು ಮಾತು ನಿಂತೋತು. ಗುರುಸ್ವಾಮಿ ತಾನೇ ಮಾತು ತೆಗೆದು ಗಂಡಹೆಂಡತಿ ಇಬ್ಬರಿಗೂ ಅನ್ನುವಂತೆ 'ಈ ವರ್ಷ ನಿಮ್ಮಿ ಮದುವೆ ಮಾಡಿಬಿಡೋಣ ಕಣ್ರಪ್ಪಾ. ಎಲ್ಲ ಚೆನ್ನಾಗಿದ್ದಾಗಲೇ ಆಗಿಬಿಡಲಿ' ಅಂದ. ಯಾರಿಂದಲೂ ತಕ್ಷಣಕ್ಕೆ ಪ್ರತಿಕ್ರಿಯೆ ಬರಲಿಲ್ಲ. ಗುರುಸ್ವಾಮಿಯ ಹೆಂಡತಿಯೂ ಮಾತಿಗೆ ಸೇರಿಕೊಂಡಳು. 'ಹೂಂ ಎಲ್ಲ ಚೆನ್ನಾಗಿದ್ದಾಗಲೇ ಆಗಿಬಿಡಲಿ. ಶಿವ್ಲಿಂಗುಗೂ ಒಂದು ಮಾತು ಹೇಳಿ' ಎಂದು ಕಿರಿಮಗನನ್ನೂ ಬಿಡದಂಗೆ ನೋಡಿಕೊಂಡಳು. ಅದಕ್ಕೆ ಗುರುಸ್ವಾಮಿ, 'ನೀನೇ ನೋಡಿದಲ್ಲಮ್ಮಿ, ಆ ಕಮಂಗಿಗಳು ಆಡೋದನ್ನ. ಅವುಕ್ಕೆ ನಮ್ಮುನ್ ಕಂಡರೆ ಮೂರುಕಾಸಿನ ಗೌರವವೇನಾರೂ ಐತಾ' ಎಂದು ತಡೆದಿಟ್ಟ ಸಿಟ್ಟನ್ನು ಹೊರಹಾಕಿದ. ಹಿರೀಮಗ ಸೊಸೆ ಇಬ್ಬರೂ ಮಿಕಿ ಮಿಕಿ ನೋಡಿದರೇ ವಿನಾ ಯಾವ ಮಾತೂ ಬರಲಿಲ್ಲ. ಪ್ರತಿಕ್ರಿಯೆಗೆ ಕಾಯುತ್ತಿರುವ ಅಪ್ಪನಿಗೆ 'ನಿಮ್ಮಿ ಕಾಲೇಜಿಂದ ಬರಲಿ ಕಣಪ್ಪಾ, ಅವಳನ್ನೂ ಒಂದು ಮಾತು ಕೇಳನ. ಎಂಗೂ ಇವತ್ತು ಮಾರ್ನಿಂಗ್ ಕ್ಲಾಸು.

